೧೯೮೯-೯೦ನೇ ಸಾಲಿನಲ್ಲಿ ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮ ಧನಸಹಾಯ ನೀಡಿದ ಕನ್ನಡ ಚಲನಚಿತ್ರಗಳ ಬಗ್ಗೆ

೩೫೫. ಶ್ರೀ ಪೆರಿಕ್ಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) —ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

(ಅ) ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದವರು ೧೯೮೯-೯೦ನೇ ಸಾಲಿನಲ್ಲಿ ಆರ್ಥಿಕ ನೆರವು ನೀಡಿದ ಕನ್ನಡ ಚಲನಚಿತ್ರಗಳ ಹೆಸರುಗಳೇನು ?

(ಆ) ಈ ಅವಧಿಯಲ್ಲಿ ಪ್ರತಿ ಕನ್ನಡ ಚಲನಚಿತ್ರಕ್ಕೆ ಎಷ್ಟು ಹಣವನ್ನು ಒದಗಿಸಲಾಗಿದೆ ?

(ಇ) ಧನಸಹಾಯ ಒದಗಿಸಲು ನಿರಾಕರಿಸಲಾದ ಕನ್ನಡ ಚಲನಚಿತ್ರಗಳ ಹೆಸರುಗಳೇನು ?

(ಈ) ೧೯೮೯-೯೦ನೇ ಸಾಲಿನಲ್ಲಿ ಈ ನಿಗಮವು ಎಷ್ಟು ಧನಸಹಾಯ ನೀಡಲು ಉದ್ದೇಶಿಸಿದೆ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ವಾರ್ತಾ ಸಚಿವರು)—

(ಅ) ಯಾವುದೂ ಇಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಇಲ್ಲ.

(ಈ) ಧನಸಹಾಯ ನೀಡುವ ಯಾವುದೇ ಯೋಜನೆ ಇಲ್ಲ.

ರಾಜ್ಯದಲ್ಲಿ ಮಾನ್ಯತೆ ಪಡೆದ ವಾಣಿಜ್ಯ ಶಾಲೆಗಳ ಸಂಖ್ಯೆ

೩೪೮. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ)—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಮಾನ್ಯತೆ ಪಡೆದು ಬೆರಳಚ್ಚು ಮತ್ತು ಶೀಘ್ರಲಿಪಿಗಳನ್ನು ಬೋಧಿಸುತ್ತಿರುವ ವಾಣಿಜ್ಯ ಶಾಲೆಗಳು ಎಷ್ಟು ? (ಜಿಲ್ಲಾವಾರು ಮಾಹಿತಿ ಕೊಡಬೇಕು).

(ಆ) ಈ ವಾಣಿಜ್ಯ ಶಾಲೆಗಳು ಪ್ರತಿ ವರ್ಷ ತುಂಬುವ ಮಾನ್ಯತೆ ನವೀಕರಣದ ಶುಲ್ಕ ?

(ಇ) ಈ ವಾಣಿಜ್ಯ ಶಾಲೆಗಳು ವ್ಯಾಪಾರಿ ಸಂಸ್ಥೆಯಂತೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಈ) ಹಾಗಿದ್ದರೆ ಈ ವಾಣಿಜ್ಯ ಸಂಸ್ಥೆಗಳು ಸ್ಟಾಫ್ ಮತ್ತು ಎಸ್ಟಾಬ್ಲಿಷ್‌ಮೆಂಟ್ ಆಕ್ಟ್ ವ್ಯಾಪ್ತಿಗೆ ಬರುತ್ತದೆಯೇ ?

(ಉ) ಹಾಗಿಲ್ಲದಿದ್ದರೆ, ಈ ವಾಣಿಜ್ಯ ಶಾಲೆಯನ್ನು ಸ್ಟಾಫ್ ಮತ್ತು ಎಸ್ಟಾಬ್ಲಿಷ್ ಮೆಂಟ್ ಆಕ್ಟ್‌ಗೆ ಒಳಪಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಕೆ. ಎಚ್. ರಂಗನಾಥ್ (ಶಿಕ್ಷಣ ಸಚಿವರು)—

(ಅ) ೧೪೬೬ (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ).

(ಆ) ತಾತ್ಕಾಲಿಕ ಮಾನ್ಯತೆ ಪಡೆದಿರುವ ವಾಣಿಜ್ಯ ಶಾಲೆಗಳು ರೂ. ೧೫೫ನ್ನು ಮಾನ್ಯತೆ ನವೀಕರಣಕ್ಕೆ ಪ್ರತಿ ವರ್ಷ ತುಂಬಬೇಕು. (ಖಾಯಂ ಮಾನ್ಯತೆ ಪಡೆದ ವಾಣಿಜ್ಯ ಶಾಲೆಗಳಿಗೆ ಈ ಶುಲ್ಕದಿಂದ ವಿನಾಯಿತಿ ಇರುತ್ತದೆ).

(ಇ) ಇಲ್ಲ.

(ಈ) ಇಲ್ಲ.

(ಉ) ಇಲ್ಲ.

ಜಿಲ್ಲಾವಾರು ವಾಣಿಜ್ಯ ಶಾಲೆಗಳ ಪಟ್ಟಿ

೧	ಬೆಂಗಳೂರು ನಗರ	...	೩೫
೨	ಬೆಂಗಳೂರು ಗ್ರಾಮಾಂತರ	...	೭೪
೩	ಕೋಲಾರ	...	೮೦
೪	ತುಮಕೂರು	...	೨೬
೫	ಮೈಸೂರು	...	೧೦
೬	ಮಂಡ್ಯ	...	೪೩
೭	ಮಂಗಳೂರು (ದಕ್ಷಿಣ ಕನ್ನಡ)	...	೧೪೬
೮	ಕೊಡಗು	...	೧೯
೯	ಚಿತ್ರದುರ್ಗ	...	೬೫
೧೦	ಚಿಕ್ಕಮಗಳೂರು	...	೩೯
೧೧	ಶಿವಮೊಗ್ಗ	...	೬೨
೧೨	ಹಾಸನ	...	೩೭
೧೩	ಧಾರವಾಡ	...	೯೨
೧೪	ಬೆಳಗಾಂ	...	೬೯
೧೫	ಬಿಜಾಪುರ	...	೫೯
೧೬	ಕಾರವಾರ (ಉತ್ತರ ಕನ್ನಡ)	...	೫೦
೧೭	ಗುಲ್ಬರ್ಗ	...	೪೯
೧೮	ರಾಯಚೂರು	...	೩೩
೧೯	ಬೀದರ್	...	೪೬
೨೦	ಬಳ್ಳಾರಿ		೪೪
		ಒಟ್ಟು	೧೪೬೬

ಅಧ್ಯಕ್ಷರು.—ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು. ಈಗ ೬೮ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ.

ರಾಜ್ಯದಲ್ಲಿ ಪಿ.ಯು.ಸಿ. ಸೇರಬಯಸುವ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಗತಿಗಳನ್ನು ತೆರೆಯಲು ಒತ್ತಾಯ

ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಸನ್ಮಾನ್ಯ ಸಭಾಧ್ಯಕ್ಷರೇ, ತಮ್ಮ ಮೂಲಕ ನಾನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಬಯಸುತ್ತೇನೆ. ಇದು ಬಹಳ ಮುಖ್ಯವಾದಂಥ ವಿಷಯವಾಗಿದೆ. ಮಾನ್ಯ ಶಿಕ್ಷಣ ಸಚಿವರು ತಮ್ಮ ಬೇಡಿಕೆಗಳ ಮೇಲೆ ಮಾತನಾಡ ತಕ್ಕಂಥ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಮತ್ತು ರಾಜ್ಯಾದ್ಯಂತ ಎಸ್ ಎಸ್ಎಲ್ಸಿ ಪಾಸ್ ಆದ ವಿದ್ಯಾರ್ಥಿಗಳಿಗೆ ಪಿಯುಸಿ ಶಿಕ್ಷಣಕ್ಕೆ ಪ್ರವೇಶ ನಿರಾಕರಣೆ ಮಾಡಿದಂಥ ಸನ್ನಿವೇಶದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರವೇಶ ಬಯಸುವ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದಾಗಿ ಅಂಥ ಕಾಲೇಜುಗಳಲ್ಲಿ ಸೆಕ್ಷನ್ಸ್‌ನ್ನು ಹೆಚ್ಚು ಮಾಡುತ್ತೇವೆ ಮತ್ತು ಅಡ್ಮಿಷನ್ ಹೆಚ್ಚುಮಾಡುತ್ತೇವೆ ಎಂದ